**ಕೆ.ಆರ್. ಪೇಟೆಯಲ್ಲಿ ಬಸ್ ಡಿಪೋ ಪ್ರಾರಂಭಿಸುವುದು**

1008 (1331) - ಶ್ರೀ ಕೆ. ಬಿ. ಚಂದ್ರಶೇಖರ್ (ಕೆ.ಆರ್. ಪೇಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜಪೇಟೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಸ್ ಡಿಪೋ ನಿವೇಶನಕ್ಕೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯವರಿಗೆ ಹಣ ಪಾವತಿಸಲಾಗಿದೆಯೇ;

ಆ) ನಿವೇಶನವು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯವರಿಂದ ಹಸ್ತಾಂತರವಾಗಿದೆಯೇ;

ಇ) ಡಿಪೋ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಇಲ್ಲ

ಇ) ಎ.ಪಿ. ಎಂ.ಸಿ. ಪತಿಯಿಂದ ಬಸ್ ಘಟಕಕ್ಕಾಗಿ ನಿವೇಶನವನ್ನು ಸಾರಿಗೆ ನಿಗಮದ ವಶಕ್ಕೆ ಪಡೆದ ನಂತರ ಸ್ಥಳೀಯ ಸಾರಿಗೆ ಅವಶ್ಯಕತೆ ಮತ್ತು ಸಂಸ್ಥೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

**ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗಳು**

1009 (1332) - ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್. ಪೇಟೆ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಎಷ್ಟು ಏತನೀರಾವರಿ ಯೋಜನೆಗಳು ಇವೆ; ಎಷ್ಟು ಹೊಸದಾಗಿ ಮಂಜೂರಾಗಿವೆ; ಸ್ಥಗಿತಗೊಂಡಿರುವ ಏತನೀರಾವರಿ ಯೋಜನೆಗಳ ಬಾಕಿ ವಿದ್ಯುತ್ ತೆರಿಗೆ ಪಾವತಿಸಲಾಗಿದೆಯೇ; ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಈ ತಾಲ್ಲೂಕಿನ ಯಾವ ಕೆರೆಗಳ ಹೂಳೆತ್ತುವ ಯೋಜನೆ ಕಾಮಗಾರಿಗೆ ಸೇರಿವೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಮಂಡ್ಯ ಜಿಲ್ಲೆ, ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ 8 ಏತನೀರಾವರಿ ಯೋಜನೆಗಳು ನಿರ್ವಹಣೆಯಲ್ಲಿ ಇರುತ್ತವೆ. ಯಾವುದೇ ಹೊಸ ಏತನೀರಾವರಿ ಯೋಜನೆ ಕೈಗೊಂಡಿರುವುದಿಲ್ಲ. ಈ 8 ಏತನೀರಾವರಿ ಯೋಜನೆಗಳ ಪೈಕಿ 3 ಏತನೀರಾವರಿ ಯೋಜನೆಗಳಿಗೆ ಒಟ್ಟು ರೂ. 24,34,834-00 ವಿದ್ಯುತ್ ಶುಲ್ಕ ಪಾವತಿಸಬೇಕಾಗಿದ್ದು, ಬಾಕಿ ಇರುವ ಕಾರಣ ಸ್ಥಗಿತಗೊಂಡಿದೆ. ವಿದ್ಯುತ್ ಬಾಕಿ ಪಾವತಿಸಿದ ನಂತರ ಈ ಯೋಜನೆಗಳನ್ನು ಪ್ರಾರಂಭಿಸಲಾಗುವುದು.

ಆ) ಸಣ್ಣ ನೀರಾವರಿ ಇಲಾಖೆಯಿಂದ ಹೋಬಳಿಗೊಂದು ಸೆರೆಯಂತೆ ರೈತ ಕಾಯಕ ಕೆರೆ ಯೋಜನೆಯಲ್ಲಿ ಕೆರೆಯ ಸಮಗ್ರ ಅಭಿವೃದ್ಧಿಗೆ ಯೋಜಿಸಿದ್ದು ಅದರಲ್ಲಿ ಹೂಳೆತ್ತುವ ಕೆಲಸವು ಸೇರಿವೆ. ಇದರಲ್ಲಿ ಕೆ.ಆರ್. ಪೇಟೆ ತಾಲ್ಲೂಕಿನ 6 ಕೆರೆಗಳು ಸೇರಿದ್ದು ಮೊದಲನೇ ಹಂತದಲ್ಲಿ ವಿಧಾನ ಸಭಾ ಕ್ಷೇತ್ರಕ್ಕೊಂದು ಕೆರೆಯಂತೆ ಕೈಗೊಳ್ಳಲು ಉದ್ದೇಶಿಸಿದಯಾದಿಯಲ್ಲಿ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಸಾರಂಗಿ ಕೆರೆ ಸೇರಿದೆ. ರೈತ ಕಾಯಕ ಕೆರೆ ಯೋಜನೆಯಲ್ಲಿ ಸೇರಿದ 6 ಕೆರೆಗಳ ವಿವರ ಅನುಬಂಧ (1) ರಲ್ಲಿ ನೀಡಲಾಗಿದೆ.